ಎಳ್ಳು ಬೆಲ್ಲವನ್ನು ಈ ಸಮಯದಲ್ಲಿ ಸೇವನೆ ಮಾಡಿದರೆ ಶೀತ ವಾತದಿಂದ ಉಂಟಾಗುವ ಜಡ್ಡು, ಆಲಸ್ಯಗಳನ್ನು ದೂರ ಮಾಡಿ ಆರೋಗ್ಯ ಸುಧಾರಣೆಯಾಗುತ್ತದೆ. ಈ ಕಾರಣಕ್ಕೆ ಎಳ್ಳು–ಬೆಲ್ಲವನ್ನು ಹಿತಮಿತವಾಗಿ ಸೇವಿಸಬೇಕು.

ಕರ್ನಾಟಕದ ರೈತರಿಗೆ ಇದು ಸುಗ್ಗಿ ಹಬ್ಬ. ಈ ಮಂಗಳಕರ ದಿನ ಹೆಣ್ಣುಮಕ್ಕಳು ಹೊಸ ಬಟ್ಟೆ ತೊಟ್ಟು, ತಟ್ಟೆಯಲ್ಲಿ ಎಳ್ಳು–ಬೆಲ್ಲ ಹಿಡಿದು ಮನೆಮಂದಿಗೆಲ್ಲ ಅಷ್ಟೇ ಅಲ್ಲ, ಅಕ್ಕಪಕ್ಕದ ಮನೆಯರಿಗೂ ಹಂಚಿ, ಸ್ನೇಹಿತರಿಗೂ ಕೊಟ್ಟು ತಿನ್ನುವ ಕ್ಷಣ ಅವಿಸ್ಮರಣೀಯವೂ ಆಗಿರುತ್ತದೆ. ಎಳ್ಳು–ಬೆಲ್ಲದ ವಿನಿಮಯದ ವೇಳೆ ‘ಎಳ್ಳು ಬೆಲ್ಲ ತಿಂದು ಒಳ್ಳೆಯ ಮಾತಾಡೋಣ’ ಎಂದು ಹೇಳಿ ಸ್ನೇಹ ಬಾಂಧವ್ಯದ ಬೆಸುಗೆಯನ್ನು ಗಟ್ಟಿಗೊಳಿಸುವ ಸಂಕೇತವೂ ಇದಾಗಿದೆ. ಸಂಜೆಯ ಹೊತ್ತು ಜೋಕಾಲಿ ಆಡುತ್ತಾ, ಹುಡುಗರು ಗಾಳಿಪಟ ಹಾರಿಸಿ ಖುಷಿಪಡುವ ಸಂಭ್ರಮವೂ ಸಂಕ್ರಾಂತಿಯ ಭಾಗವೇ ಆಗಿದೆ.

ಮಹಿಳೆಯರು ಬೆಳಗ್ಗಿನ ಹೊತ್ತಿನಲ್ಲಿ ಬಾಗಿಲ ಮುಂದೆ ಸುಂದರ ಚಿತ್ತಾರದ ರಂಗೋಲಿ ಹಾಕುವುದು ಒಂದೆಡೆಯಾದರೆ, ಹಳ್ಳಿಗಳಲ್ಲಿ ದನಕರುಗಳನ್ನು ಮೀಯಿಸಿ, ಅಲಂಕಾರ ಮಾಡಿ ಪೂಜೆ ಮಾಡುವ ಸಂಪ್ರದಾಯವೂ ಇದೆ. ಕಿಚ್ಚು ಹಾಯಿಸುವುದು ಕೂಡ ಹಬ್ಬದ ಸಂಭ್ರಮದಲ್ಲಿ ಅಡಕವಾಗಿದೆ.

ಸಂಕ್ರಾಂತಿ ಪುಣ್ಯ ಕಾಲದಲ್ಲಿ, ನದಿ ಸ್ನಾನ, ದೇವತೆಗಳಿಗೆ, ಪಿತೃಗಳಿಗೆ ತರ್ಪಣ, ಉಪವಾಸ, ಹೋಮ, ಜಪ, ದಾನಗಳಿಗೆ ಪ್ರಶಸ್ತವೆನಿಸಿದೆ. ಇವೆಲ್ಲವನ್ನೂ ವಿದ್ಯುಕ್ತವಾಗಿ ಆಚರಿಸಿದರೆ ಸಮಾಧಾನ, ನೆಮ್ಮದಿ ಪ್ರಾಪ್ತವಾಗುತ್ತದೆ ಎಂಬುದು ಜ್ಯೋತಿಷ್ಯ ತಜ್ಞರ ಅಭಿಮತ.

ತಮಿಳುನಾಡಿನಲ್ಲಿ ಸಂಕ್ರಾಂತಿ ದೊಡ್ಡ ಹಬ್ಬವೇ ಆಗಿದೆ. ‘ಪೊಂಗಲ್’ ಎಂದೇ ಕರೆಯುವ ಈ ಹಬ್ಬವನ್ನು ನಾಲ್ಕು ದಿನಗಳ ಕಾಲ ಆಚರಿಸುವುದು ಇಲ್ಲಿನ ಪದ್ಧತಿ. ಇದನ್ನು ಭೋಗಿ ಹಬ್ಬ ಎಂದೂ ಕರೆಯುವುದಿದೆ. ಕೆಲವು ಕಡೆಗಳಲ್ಲಿ ‘ಜಲ್ಲಿಕಟ್ಟು’ ಆಡುವುದು ಕೂಡ ಇದೇ ಹಬ್ಬದಲ್ಲಿ.

ಕೇರಳದಲ್ಲಿ ಮಕರ ಸಂಕ್ರಾಂತಿ ಎಂದರೆ ‘ವಿಶೇಷ ಹಬ್ಬ’ ಎಂದೇ ಪ್ರಸಿದ್ಧಿ. ಶಬರಿಮಲೆಯಲ್ಲಿ ಈ ದಿನ ‘ಮಕರ ವಿಳಕ್ಕು’ (ಮಕರ ಜ್ಯೋತಿ) ಸಡಗರ. ಅಯ್ಯಪ್ಪನ ಸನ್ನಿಧಿಯಲ್ಲಿ ಸೂರ್ಯನ ದಿವ್ಯಜ್ಯೋತಿಯನ್ನು ಕಣ್ತುಂಬಿಕೊಳ್ಳುವುದು, ಸಾರ್ಥಕ್ಯದ ಭಾವ ಪಡೆದು ಧನ್ಯರಾಗುವುದು ಇದೆ. ಇದಕ್ಕಾಗಿ ದೇಶ ವಿದೇಶಗಳಿಂದ ಭಕ್ತರು ಶಬರಿಮಲೆಗೆ ಆಗಮಿಸಿ ಸಂಭ್ರಮಿಸುವುದು ಇದೇ ಹಬ್ಬದಲ್ಲಿ.

ಗುಜರಾತ್, ಮಹಾರಾಷ್ಟ್ರಗಳಲ್ಲೂ ಸಂಕ್ರಾಂತಿ ಸಡಗರ ಆಪ್ಯಾಯಮಾನವೇ. ಇಲ್ಲಿ ಗಾಳಿಪಟಗಳನ್ನು ಹಾರಿಬಿಡುವುದು ಬಹಳಷ್ಟು ಪ್ರಸಿದ್ಧಿ.

ಸಂಕ್ರಾಂತಿ ಅಂಗಳದಲ್ಲಿದೆ. ಸೂರ್ಯ ಪಥ ಬದಲಿಸುವ ಈ ಸುಸಂದರ್ಭವೂ ಇದಾಗಿದೆ. ಈ ಬದಲಾವಣೆ ಒಳಿತಿನ ರೂಪದಲ್ಲಿ ನಮ್ಮ ಬದುಕುಗಳಲ್ಲೂ ಆಗಲಿ. ‘ಸುಗ್ಗಿಯು ಬಂದಿತು ಹಿಗ್ಗನು ತಂದಿತು, ನಮ್ಮಯ ನಾಡಿನ ಜನಕೆಲ್ಲಾ..’ ಹಾಡನ್ನು ಗುನುಗುನಿಸುತ್ತಾ ಹಬ್ಬವನ್ನು ಸಂಭ್ರಮಿಸೋಣ.

ಪ್ರತಿಕ್ರಿಯಿಸಿ: feedback@sudha.co.in





ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಬ್ರಹ್ಮಗಿರಿ ಬೆಟ್ಟದಲ್ಲಿನ ಸಿದ್ದೇಶ್ವರ ದೇವಸ್ಥಾನದಲ್ಲಿ ಭಕ್ತರಿಂದಲೇ ಆಚರಿಸಲಾಗುವ ಸಂಕ್ರಾಂತಿ ರಾಜ್ಯದ ಮೂಲೆಮೂಲೆಗಳಿಂದ ಭಕ್ತರನ್ನು ಸೆಳೆಯುತ್ತಿದೆ.

# ಭಕ್ತರಿಂದಲೇ ಸಾಕಾರಗೊಳ್ಳುವ ಆಚರಣೆ

■ **ಶೇಖರಯ್ಯ ಟಿ.ಎಚ್.ಎಂ., ಗೆದ್ದಲಗಟ್ಟೆ**

ಎಳ್ಳು ಬೆಲ್ಲ, ರಂಗೋಲಿ ಚಿತ್ತಾರ, ಗೋಮಾತೆಯ ಪೂಜೆ, ದೇವರ ಪೂಜೆ, ಖಡಕ್ ರೊಟ್ಟಿಗಳು, ವಿಧ ವಿಧವಾದ ಪಲ್ಯಗಳು, ಪುಡಿಗಳು, ಹಿರಿಯರ ಆಶೀರ್ವಾದ... ಹೀಗೆ ಒಂದು ಯಶಸ್ವಿ ಸಂಕ್ರಾಂತಿಗೆ ಏನು ಬೇಕೋ ಅದೆಲ್ಲವೂ ಇಲ್ಲಿ ಪವಾಡ ಎಂಬಂತೆ ಸಿದ್ಧಗೊಳ್ಳುತ್ತದೆ. ಇಂತಹ ವಿಶೇಷವಾದ ಸಂಕ್ರಾಂತಿ ಆಚರಣೆ ನಡೆಯುವುದು ಬ್ರಹ್ಮಗಿರಿ ಬೆಟ್ಟದಲ್ಲಿ. ಈ ಬೆಟ್ಟ ಇರುವುದು ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ಅಶೋಕ ಸಿದ್ದಾಪುರ ಬಳಿಯ ಕಾಡು ಸಿದ್ದಾಪುರದ ಹತ್ತಿರ.

ಬ್ರಹ್ಮಗಿರಿ ಅಂದಾಕ್ಷಣ ಥಟ್ಟನೆ ನೆನಪಾಗುವುದು ದೇವನಾಂಪ್ರಿಯ ಪ್ರಿಯದರ್ಶಿ ಅಶೋಕ ಕೊರೆಸಿರುವ ಅಶೋಕ ಶಾಸನವಿರುವ ಚಾರಿತ್ರಿಕ ಸ್ಥಳವೆಂದು. ಇಂತಹ ಸ್ಥಳದ ಬೆಟ್ಟದ ಮೇಲಿರುವ ಸಿದ್ದೇಶ್ವರ ದೇವಸ್ಥಾನದಲ್ಲಿ ಪ್ರತಿ ವರ್ಷವೂ ಭಕ್ತರಿಂದ, ಭಕ್ತರಿಗಾಗಿ, ಭಕ್ತರಿಗೋಸ್ಕರವೇ ಸಂಕ್ರಾಂತಿ

